ಕುಲ, ಗೋತ್ರ... ಹೀಗೆ ಎಲ್ಲವನ್ನೂ ತಿಳಿದುಕೊಂಡು ಬೆರಳುಗಳಿಂದ ಏನನ್ನೋ ಎಣಿಸುವಂತೆ ಮಾಡಿದ. ಒಂದೆರಡು ಪುಸ್ತಕ ತೆಗೆದು ಮತ್ತೇನೋ ಹುಡುಕಾಡಿ ಗೆರೆ ಎಳೆಯುವಂತೆ ಬೆರಳುಗಳಿಂದ ಮಾಡಿದ. ನಂತರ ಗಂಗಿರೆಡ್ಡಿಯ ಹಣೆಯನ್ನೊಮ್ಮೆ ತದೇಕಚಿತ್ತದಿಂದ ದಿಟ್ಟಿಸಿ ಕಣ್ಣು ಮುಚ್ಚಿ ಧ್ಯಾನಕ್ಕೆ ಜಾರಿದ. ನಂತರ ನಿಧಾನಕ್ಕೆ ಕಣ್ಣು ತೆರೆದು 'ನೋಡಿ, ನಿಮ್ಮ ತಮ್ಮನಿಗೆ ಇನ್ನೂ ನಾಲ್ಕು ವರ್ಷ ಮದುವೆ ಯೋಗವಿಲ್ಲ... ಹೇಗೂ ಶನಿಮಹಾತ್ಮೆ ಕಥೆ ಹೇಳ್ತಾನೆ ಅಂದಿದ್ದಿರಿ ಅಲ್ಲವೆ? ಅವರಿವರ ಮನೆಗಳಲ್ಲಿ ಕಥೆ ಹೇಳುತ್ತಿರಲಿ, ಪುಣ್ಯದ ಕೊಡ ತುಂಬಿದರೆ ಗುರುವಿನ ಪ್ರವೇಶವಾಗಿ ಮದುವೆ ಇನ್ನೂ ಬೇಗ ಆದ್ರೂ ಆಗಬಹುದು' ಎಂದು ನುಡಿದು ಗಂಗಿರೆಡ್ಡಿಯ ಕಡೆಗೇ ನೋಡತೊಡಗಿದ. ಅವನು ತಲೆ ತಗ್ಗಿಸಿ ಕುಳಿತಿದ್ದ. ದೇಹ ವಿಚಿತ್ರವಾದ ಭಾರವನ್ನು ಹೊತ್ತಂತೆ ಕುಳಿತಿತ್ತು. ಆ ವ್ಯಕ್ತಿ ಗಂಗಿರೆಡ್ಡಿಯ ಕಂಗಳನ್ನೇ ದಿಟ್ಟಿಸುತ್ತಾ 'ಎಲ್ಲಿ ಎರಡು ಸಾಲು ಹಾಡು ಕೇಳೋಣ' ಎಂದು ನುಡಿದ. ಗಂಗಿರೆಡ್ಡಿ ತಲೆಯನ್ನು ಎತ್ತಿ ಅವನ ಮುಖವನ್ನೊಮ್ಮೆ ದಿಟ್ಟಿಸಿದ. ಭಯ ತರಿಸುವ ತೇಜಸ್ಸು. ಸಮ್ಮೋಹನಗೊಂಡೆನೇನೋ ಎಂಬ ಅನುಮಾನದಲ್ಲಿ ಮತ್ತೆ ತಲೆತಗ್ಗಿಸಿ ಕುಳಿತ. ಆ ವ್ಯಕ್ತಿ ಮತ್ತೆ ಹಾಡಲು ಕೇಳಿಕೊಂಡ. ಹಾಡಲೋ ಬೇಡವೋ ಎಂಬ ಅನುಮಾನದಲ್ಲೇ ಕುಳಿತಿದ್ದವನಿಗೆ ಶನಿಮಹಾತ್ಮೆಯ ಪದಗಳನ್ನು ಹಾಡಲಿಕ್ಕೆ ತನೆಗೆಂತ ಮುಜುಗರ ಎಂದನಿಸಿ, 'ವಿಕ್ರಮನು ಇಳಿದು ತಾನೂ ಸುತ್ತಾಮುತ್ತಾ ತಿರುಗಿ ನೋಡೆ, ತೋರುತಿರುವಾ ಅಡವೀ ಇಲ್ಲಾವ್ಪೂ... ಓ ಶಂಭುಲಿಂಗಾ ಹರಿಯುವಂತಾ ನದಿಯು ಇಲ್ಲಾವ್ಪೂ...' ಹೀಗೆ ಜೋರಾಗಿ ಹಾಡಿದ. ಆ ವ್ಯಕ್ತಿ 'ಓಹ್ ಅದ್ಭುತ... ಕಂಠವೂ ಅದ್ಭುತ' ಎಂದು ನುಡಿದು ದೇವರೆಡ್ಡಿಯ ಕಡೆ ತಿರುಗಿ ಮತ್ತೆ 'ನೋಡು ದೇವರೆಡ್ಡಿ, ಈ ಪಟ್ಟಣದೋರಿಗೆ ಶನಿ ಕಾಟ ಜಾಸ್ತಿ. ಏನೇ ಒಂದು ಸಣ್ಣ ತೊಂದ್ರೆ ಆದ್ರೂ ನನ್ನ ಹತ್ರ ಪರಿಹಾರ ಕೇಳಿಕೊಂಡು ಬರ್ತಾರೆ. ದಿನಕ್ಕೆ ಹತ್ತು ಜನಾನಾದ್ರು ಬರ್ತಾರೆ. ಹಾಗೆ ಬಂದೋರಿಗೆಲ್ಲಾ ಶನಿಕಾಟ ಇದೆ ಎಂದು ತಿಳಿಸಿ ಶನಿಮಹಾತ್ಮೆ ಕಥೆ ಮಾಡಿಸುವುದಕ್ಕೆ ಹೇಳ್ತೀನಿ. ನನ್ನ ಮಾತ್ನ ನಂಬ್ತಾರೆ. ಹೇಗೂ ನಿನ್ನ ತಮ್ಮ ಶನಿಮಹಾತ್ಮೆ ಕಥೆ ಮಾಡ್ತಾನೆ. ಪ್ರತಿ ಶನಿವಾರ ಒಂದು ಮನೆ ಸಿಗೋಥರಾ ಮಾಡ್ತೀನಿ. ಜೊತೆಗೆ ಗಂಗಿರೆಡ್ಡಿ ಹಾಡುವುದನ್ನು ರೆಕಾರ್ಡ್ ಮಾಡಿಕೊಂಡು ನನ್ನ ಯೂಟ್ಯೂಬ್ ಚಾನಲ್ಲಿನಲ್ಲಿ ಹಾಕಿದರೆ ಇನ್ನೂ ಡಿಮ್ಯಾಂಡ್ ಜಾಸ್ತಿ ಆಗುತ್ತೆ. ಬಂದವರ ಹಣಕಾಸಿನ ಸ್ಥಿತಿಗತಿ ನೋಡಿಕೊಂಡು ಹತ್ತರಿಂದ ಇಪ್ಪತ್ತು ಸಾವಿರದವರೆಗೂ ತೆಗೆದುಕೊಳ್ಳಬಹುದು. ಅದರಲ್ಲಿ ನನಗರ್ಧ ನಿನ್ನ ತಮ್ಮನಿಗೆ ಅರ್ಧ...' ಎಂದು ನುಡಿದು ಪ್ರತಿಕ್ರಿಯೆಗಾಗಿ ಕಾಯುವವನಂತೆ ಕುಳಿತ.

ದೇವರೆಡ್ಡಿ 'ಈ ಡೀಲ್ ನಂಗೆ ಓಕೆ. ಮತ್ತೆ ದುಡ್ಡೇನಿದ್ರು ನನ್ತಾವೆ ಕೊಡಿ. ನನ್ನ ತಮ್ಮನ್ಗೇನು ಹೆಣ್ತೀನೆ ಮಕ್ಕೆ ಮರೀನೆ? ಅಂತೊಟ್ಟು ಕಾಸು ಮಡಿಕ್ಕಂಡು ಅವ್ನೇನು ಮಾಡ್ತಾನೆ. ಅಲ್ವೇನೋ ಗಂಗ' ಎಂದು ನುಡಿದು ಗಂಗಿರೆಡ್ಡಿಯ ಕಡೆಗೆ ನೋಡಿದ.

ಗಂಗಿರೆಡ್ಡಿಗೆ ತನ್ನ ಅಣ್ಣನ ಮುಖವನ್ನು ನೋಡಬೇಕನಿಸಲಿಲ್ಲ. ಬಹಳ ಹೊತ್ತು ಏನೂ ಮಾತನಾಡದೆ ಕುಳಿತುಬಿಟ್ಟ. ಕಂಗಳು ಒದ್ದೆಯಾಗತೊಡಗಿದವು. ಬಿಕ್ಕಿ ಬಿಕ್ಕಿ ಅಳಬೇಕನಿಸಿತು. ಒಮ್ಮೆ ತಲೆಯೆತ್ತಿ ನೋಡಿದ. ಅವನ ಒಪ್ಪಿಗೆಗಾಗಿ ಅಲ್ಲಿದ್ದವರು ಕಾತುರದಿಂದ ಕಾದಿರುವಂತೆ ನೋಡುತ್ತಲಿದ್ದರು. ಗಂಗಿರೆಡ್ಡಿ ತನಗ್ಯಾರ ಗೊಡವೆಯೂ ಬೇಡವೆಂಬಂತೆ ಎದ್ದು ನಿಂತು ಆಚೆ ನಡೆಯತೊಡಗಿದ. ದೇವರೆಡ್ಡಿಯ ಕೂಗೂ ಅವನಿಗೆ ಕೇಳಿಸದ ವೇಗದಲ್ಲಿ ಅಚೆ ನಡೆದು ಪಟ್ಟಣದ ಹೃದಯ ಭಾಗಕ್ಕೆ ನುಗ್ಗಿದ.

ಅಂದು ಭಾನುವಾರವಾದ್ದರಿಂದ ದಟ್ಟಣೆ ಜೋರಾಗಿತ್ತು. ಸಂತೆಯ ಕಾರಣದಿಂದ ಪಟ್ಟಣದ ರಸ್ತೆಗಳು ಕೊಬ್ಬಿದ್ದವು. ಗಂಗಿರೆಡ್ಡಿ ಪಟ್ಟಣದ ಮುಖ್ಯ ವೃತ್ತದ ನಡುವಿಗೆ ಬಂದು ನಿಂತು ಆಕಾಶ ನೋಡತೊಡಗಿದ. ನಾಲ್ಕೂ ದಿಕ್ಕುಗಳಿಂದ ವಾಹನಗಳ ಸದ್ದು ಮುಗಿಲು ಮುಟ್ಟತೊಡಗಿತು. ಅವನು ಕದಲದೆ ನಿಂತೇ ಇದ್ದ. ವಾಹನಗಳ ಸದ್ದು ಮತ್ತೂ ಜೋರಾಯಿತು. ಟ್ರಾಫಿಕ್ ಸಿಗ್ನಲ್ಲಿನ ದೀಪಗಳು ತಮ್ಮ ಪಾಡಿಗೆ ತಾವು ಬಣ್ಣ ಬದಲಿಸುತ್ತಲಿದ್ದವು. ಗಂಗಿರೆಡ್ಡಿ ತಲೆಯನ್ನು ಮತ್ತೂ ಮೇಲಕ್ಕೆ ಎತ್ತಿ 'ಶನಿರಾಜಾ ಬಂದಾನು ಉಜ್ಜಯಿನೀ ನಗರಿಗೇ... ಘನವಾದ ಅಶ್ವವನು ಕಲಿರಾಜ ತಾರೇ... ಬೇಕಾದ ಬೇಪಾರಿ ಜನರೆಲ್ಲ ಕೂಡಲೂ... ವಿಕ್ರಮರಾಜಾ ತಾನೂ...' ಎಂದು ಜೋರಾಗಿ ಹಾಡತೊಡಗಿದ. ವಾಹನಗಳ ಸದ್ದಿನ ದಟ್ಟಣೆಯ ಇಕ್ಕಟ್ಟಿನಲ್ಲಿ ಅವನ ಹಾಡು ಊರ್ಧ್ವರೇಖೆಯಲ್ಲಿ ಚಲಿಸಿ ಆಕಾಶದ ನೀಲಿಯಲ್ಲಿ ನೀಲಿಯಾಗಿ ಹಬ್ಬತೊಡಗಿತು. ●